

ಸರಿಯಾಗಿ ಏಳೂವರೆಯಾಗಿತ್ತು. ರಿಂಗ್ ರೋಡಿನಲ್ಲಿ ವಾಹನಗಳೆಲ್ಲ ಸ್ಥಗಿತಗೊಂಡಿದ್ದ ಕಾರಣ ಜಯನಗರದ ರಸ್ತೆ ಹೆಚ್ಚೂಕಮ್ಮಿ ಖಾಲಿಯಾಗಿಯೇ ಇತ್ತು. ಅಲ್ಲಿಯೇ ಒಂದು ಬಸ್ ಸ್ಟಾಪ್ ಇದ್ದು, ಅದರಡಿಯಲ್ಲಿ ರಿಂಗ್ ರೋಡ್ ಕಡೆಯಿಂದ ಯಾವುದಾದರೂ ಆಟೊ ಬರಬಹುದೆಂದು ನಿರೀಕ್ಷಿಸುತ್ತಾ ನಿಂತಳು.

ಎಷ್ಟು ಹೊತ್ತಾದರೂ ಒಂದೇ ಒಂದು ಆಟೊ ಬರಲಿಲ್ಲ. ಬದಲಾಗಿ ಆ ಬಸ್ಸು ಕಾರುಗಳ ನಡುವಿಂದ ನುಸುಳಿದ ಬೈಕ್ ಸವಾರರು ರುಂಯ್ ಎಂದು ದಾಟಿ ಹೋಗುತ್ತಿದ್ದರು. ಪುಣ್ಯಕ್ಕೆ ಮಳೆ ಕಮ್ಮಿಯಾಗಿತ್ತು. ಆದರೆ ಆ ಬಸ್ ಸ್ಟಾಪಿನ ಪಕ್ಕದಲ್ಲಿದ್ದ ಒಂದು ದೇವದಾರು ಮರದಿಂದ ನೀರ ಹನಿಗಳು ಒಂದೇ ಸವನೆ ತೊಟ್ಟಿಕ್ಕುತ್ತಿದ್ದುವು. ಪಕ್ಕದ ರಸ್ತೆಯ ಮೂಲಕ ಸುತ್ತು ಹಾಕಿ ಹೋಗಲು ನಾಲ್ಕಾರು ಆಟೊಗಳು ಬಂದುವು. ಅವಳು ಕೈ ತೋರಿಸಿ ಒಂದನ್ನಾದರೂ ನಿಲ್ಲಿಸಲು ಪ್ರಯತ್ನ ಮಾಡಿದಳು. ಒಂದೂ ನಿಲ್ಲಲಿಲ್ಲ. ಕೆಲವದರಲ್ಲಿ ಪ್ಯಾಸೆಂಜರ್ಸ್ ಇದ್ದುದೇನೋ ನಿಜ. ಆದರೆ ಕೆಲವು ಖಾಲಿಯಾಗಿಯೇ ಇದ್ದರೂ ನಿಲ್ಲಲಿಲ್ಲ. ಅವಳ ಆತಂಕ ಹೆಚ್ಚಾಯಿತು. ಗಡಿಯಾರ ಟಿಕ್ ಟಿಕ್ ಎನ್ನುತ್ತಲೇ ಇತ್ತು. ರಾತ್ರಿಯಾಗುತ್ತಿದೆ. ಒಂಟಿ ಹೆಣ್ಣೊಬ್ಬಳು ಆಟೊ ಹಿಡಿಯುವ ಪ್ರಯತ್ನದಲ್ಲಿದ್ದಾಳೆ. ಆಟೊ ಖಾಲಿಯಿದೆ. ಅವಳನ್ನು ಕರೆದುಕೊಂಡು ಹೋಗುವ – ಎನ್ನುವ ಸದ್ಬುದ್ಧಿ ಒಬ್ಬರಿಗೂ ಇದ್ದಂತಿಲ್ಲ. ಒಬ್ಬನಾದರೂ ಖಾಲಿ ಆಟೊದವನು ಬಂದು ಹತ್ತಿಸಿಕೊಳ್ಳಲಿ ಎಂದಾಕೆ ನಿಡುಸುಯ್ಯುತ್ತಾ ನಿಂತಳು.